ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 20-12-69.

(ओम शान्ति, बापदादा. अव्यक्त मुरली 20-12-1969)

***ಶುದ್ಧ (Plain) ನೆನಪಿನಿಂದ ಯೋಜನೆಗಳ (plans) ಸಫಲತೆ***

(प्लेन याद से प्लैन्स की सफ़लता)

ಇಂದು ಬಾಪ್ ದಾದಾ ಏನನ್ನು ನೋಡುತ್ತಿದ್ದಾರೆ? ಏನನ್ನು ನೋಡಲು ಮತ್ತು ಮಾಡಲು ಬಂದಿದ್ದಾರೆ? ಇಂದು ಬಾಪ್ ದಾದಾ ತಮ್ಮ ಅತಿ ಸ್ನೇಹಿ ಮಕ್ಕಳಿಗೆ ಒಂದು ವಾಯಿದೆಯನ್ನು ಮಾಡಿಸಲು ಬಂದಿದ್ದಾರೆ. ಈ ಆತ್ಮರು ವಾಯಿದೆ ಮಾಡವುದರಲ್ಲಿ ಆದಿಯಿಂದಲೂ ಪ್ರವೀಣರಾಗಿದ್ದಾರೆ. ಆರಂಭದಲ್ಲಿ ವಾಯಿದೆ ಮಾಡಲು ತಡ ಮಾಡಲಿಲ್ಲ. ಯೋಚಿಸಲಿಲ್ಲ, ಅದೇ ರೀತಿ ಈಗಲೂ ಬಾಪ್ ದಾದಾ ವಾಯಿದೆ ತೆಗೆದುಕೊಳ್ಳಲು ಬಂದಿದ್ದಾರೆ. ಹಾಗೆ ನೋಡಿದರೆ ಇಡೀ ನಾಟಕದಲ್ಲಿ ಅನೇಕ ಆತ್ಮರ ಮಧ್ಯದಲ್ಲಿ ನೀವೇ ಸಾಹಸವಿಟ್ಟುಕೊಂಡು ಸಮೀಪದಲ್ಲಿದ್ದು ಸ್ನೇಹ, ಸಹಯೋಗ ಪಡೆದಿರಿ ಮತ್ತು ಸಹಯೋಗ ನೀಡಿ ಸಾಹಸಿಗಳಾಗಿ ಪ್ರಸಿದ್ಧರಾಗಿದ್ದೀರಿ. ಈಗ ಅದೇ ಸಂಸ್ಕಾರಗಳನ್ನು ಮತ್ತೊಮ್ಮೆ ಪರೀಕ್ಷಿಸಲು ಬಂದಿದ್ದೇವೆ. ಎಲ್ಲರೂ ಸದಾ ಸಿದ್ಧರಾಗಿದ್ದೀರಲ್ಲವೇ? ಈಗಿನಿಂದಲೇ ಈ 5 ಮಾತುಗಳು- ಏಕತೆ, ಸ್ವಚ್ಚತೆ, ಸೂಕ್ಷ್ಮತೆ, ಮಧುರತೆ ಮತ್ತು ಮನ, ವಚನ, ಕರ್ಮದಲ್ಲಿ ಮಹಾನತೆ ಒಬ್ಬೊಬ್ಬರ ಪ್ರತಿಯೊಂದು ಹೆಜ್ಜೆಯಲ್ಲಿ ಕಂಡುಬರಬೇಕೆಂಬುದೇ ವಾಯಿದೆಯಾಗಿದೆ. ಭಟ್ಟಿಯ ನಂತರ ಸೇವಾ ಸ್ಥಾನಗಳಿಗೆ ಹೋಗುವುದೆಂದು ಹೇಳಿದ್ದೆವಲ್ಲವೇ. ಆ ದಿನ ನೆನಪಿದೆಯಾ? ಜನರೆಲ್ಲಾ ಆಗ ಏನೆಂದು ಹೇಳುತ್ತಿದ್ದರು? ಎಲ್ಲರ ಮುಖದಿಂದ ಇವರೆಲ್ಲ ಒಂದೇ ಅಚ್ಚಿನಿಂದ ಬಂದವರು, ಎಲ್ಲರ ಮಾತು ಒಂದೇ ಆಗಿದೆ, ಎಲ್ಲರ ವ್ಯವಹಾರ, ಎಲ್ಲರ ಆಕರ್ಷಣೆ ಎಲ್ಲಿ ನೋಡಿದರೂ ಅದೇ ಕಂಡು ಬರುತ್ತದೆ ಎಂದು ಹೇಳುತ್ತಿದ್ದರು. ಯಾರ ಪ್ರಭಾವ ಬೀಳುತ್ತಿತ್ತು? ಅವ್ಯಕ್ತ ಪಾಲನೆಯ ಪ್ರಭಾವ, ವ್ಯಕ್ತದಲ್ಲಿರುತ್ತಿದ್ದರೂ ಎಲ್ಲರಿಗೂ ಅವ್ಯಕ್ತ ಫರಿಶ್ತೆಯಂತೆ ಕಂಡುಬರುತ್ತಿದ್ದರು. ಸಾಧಾರಣ ರೂಪದಲ್ಲಿ ಆಕರ್ಷಣಾಮೂರ್ತಿ ಮತ್ತು ಅಲೌಕಿಕ ವ್ಯಕ್ತಿಗಳು ಕಂಡು ಬರುತ್ತಿದ್ದರು. ಅದು 16 ವರ್ಷಗಳ ಭಟ್ಟಿ ಇದು 16 ದಿನಗಳ ಭಟ್ಟಿ ಆದರೆ ಇವರು ಪರಿವರ್ತನೆಯಾಗಿ ಜಗತ್ತಿನ ಪರಿವರ್ತನೆಗೆ ಬಂದಿದ್ದಾರೆಂದು ಪ್ರತಿಯೊಬ್ಬರಿಗೂ ಈಗ ಪುನಃ ಗೊತ್ತಾಗಬೇಕು. ಇಡೀ ದೈವೀ ಪರಿವಾರದ ವಿಷೇಷ ದೃಷ್ಟಿ ಈ ಗುಂಪಿನ ಮೇಲಿದೆ. ಆದ್ದರಿಂದ ವಿಶೇಷ ಆತ್ಮರಿಗೆ ತಮ್ಮ ಯಾವ ವಿಶೇಷತೆ ತೋರಿಸಬೇಕು ಆ ಐದು ಮಾತುಗಳನ್ನು ಹೇಳಿದೆವು. ಯಾವಾಗ ಈ ಐದು ಮಾತುಗಳನ್ನು ಪ್ರತಿ ಮಾತು ಮತ್ತು ಕರ್ಮದಲ್ಲಿ ನೆನಪಿಟ್ಟುಕೊಳ್ಳುವಿರೋ ಆಗಲೇ ವಿಶೇಷ ಆತ್ಮರು ಎಂದು ಎಲ್ಲರಿಗೂ ಕಂಡುಬರುವಿರಿ. ಯಾವಾಗ ತಮ್ಮಲ್ಲಿ ವಿಶೇಷತೆ ತರುವಿರೋ ಆಗ ತಂದೆಯನ್ನೂ ಪ್ರತ್ಯಕ್ಷ ಮಾಡಲು ಸಾಧ್ಯ. ಕೇವಲ ಸೇವೆಯ ಯೋಜನೆಗಳಿಂದ ಆದರೆ ತಮ್ಮ ಸಂಪೂರ್ಣ ಸಂಸ್ಕಾರಗಳು, ತಮ್ಮ ಸಂಪೂರ್ಣ ಶಕ್ತಿಯಿಂದ ತಂದೆಯನ್ನು ಪ್ರತ್ಯಕ್ಷ ಮಾಡಬಹುದು. ಎಷ್ಟೇ ಯೋಜನೆಗಳನ್ನು ಮಾಡಿದರೂ, ಯಾವಾಗ ಯೋಜನೆಗಳ ಜೊತೆಗೆ ತಮ್ಮ ಪ್ರಾಮಾಣಿಕ ಪ್ರಯತ್ನ, ನಿಷ್ಠೆ, ಶ್ರದ್ಧೆಯಿರುವುದೋ ಆಗಲೇ ಯೋಜನೆಗಳೂ ಸಫಲ ಆಗುವವು. ಯಾವುದೇ ಮಿಶ್ರಣವಿಲ್ಲದಂತಹ ಶುದ್ಧ (plain) ನೆನಪು ಇದ್ದಾಗ ಸಫಲರಾಗುವಿರಿ, ಯೋಜನೆಗಳಿಗೆ ಮೊದಲು ನಿಷ್ಕಲ್ಮಶವಾದ ನೆನಪಿದೆಯೇ ಎಂದು ಪರೀಕ್ಷೆ ಮಾಡಿ. ಆರಂಭದ ವಾಯಿದೆ ಯಾವುದು? ಆ ಗೀತೆ ನೆನಪಿದೆಯಲ್ಲವೇ? ಅದನ್ನು ಪುನಃ ಸಾಕಾರ ರೂಪದಲ್ಲಿ ತರಬೇಕು ಅರ್ಥಾತ್ ಬುದ್ಧಿಯ ಏಕಾಗ್ರತೆ ಕೇವಲ ನಿಮ್ಮೊಂದಿಗಿದೆ ಎಂಬ ಸಾಕ್ಷಾತ್ಕಾರ ಸಾಕಾರ ರೂಪದಲ್ಲಿ ಎಲ್ಲರಿಗೂ ಆಗಬೇಕು. ಬಾಪ್ ದಾದಾ ಏನು ಮಾಡಲು ಮತ್ತು ಏನನ್ನು ನೋಡಲು ಬಂದಿರುವರೆಂದು ಈಗ ತಿಳಿಯಿತೆ? ಭಿನ್ನ ಭಿನ್ನ ಪ್ರಕಾರದ ಮಾತುಗಳು ಬಾಬಾರಿಗೆ ಹಿಡಿಸುತ್ತವೆ. ಇದು ಆತ್ಮಿಕ ಸಂಭಾಷಣೆಯಾಗಿದೆ. ಇದರಲ್ಲಿ ಯಾರಾದರೂ ಅನುತ್ತೀರ್ಣರಾಗುತ್ತಾರೆಯೇ? ಈಗ ನೀವು ಎಲ್ಲರನ್ನೂ ಪಾಸ್ ಮಾಡುವವರಾಗಿದ್ದೀರಿ. ನಾಪಾಸಾಗುವುದಿಲ್ಲ ಅಲ್ಲ ತಮ್ಮನ್ನು ತಾವು ನಾಪಾಸಾಗಲು ಕೊಡುವುದಿಲ್ಲ-ಇದು ಸರಿಯಾಗಿದೆ.

ಆದರೆ ಭಾವುಕರಾಗುತ್ತಿರುವಿರಿ(feel) ತಮ್ಮ ಮಾತಿನಲ್ಲಿ ವಿಜಯಿಯಾಗುವ ಕಲೆಯನ್ನು ಮಕ್ಕಳಿಂದ ಕಲಿಯಬೇಕು. ಸ್ವಲ್ಪ ಈ ಅಂತರ (feel & fail) ದೂರವಾದರೆ ಎಲ್ಲ ಆತ್ಮರು ತಮಗೆ ಬಲಿಹಾರಿಯಾಗುವರು. ಹೇಗೆ ತಾವೆಲ್ಲರೂ ಬಾಪ್ ದಾದಾರಿಗೆ ಅರ್ಪಣೆಯಾಗಿರುವಿರೋ ಅದರಂತೆಯೇ ತಮ್ಮ ಭಕ್ತರು ತಮಗೆ ಅರ್ಥಾತ್ ಶಕ್ತಿಯರಿಗೆ ಅರ್ಪಣೆಯಾಗುವರು. ಆದರೆ ಕೇವಲ ಪಶ್ಚಾತ್ತಾಪದ ಅನುಭವ (feel) ಆಗುವ ಮಾತುಗಳು ಸಮಾಪ್ತಿಯಾಗಬೇಕು. ತಕ್ಷಣವೇ ಒಪ್ಪಂದ ಮಾಡಿಕೊಂಡು ಎಲ್ಲರಿಗಿಂತ ಬುದ್ಧಿವಂತರಾದಿರಿ. ಈ ಸೃಷ್ಟಿಯ ಎಲ್ಲ ಆತ್ಮರ ಮುಂದೆ ಸಾಹಸಿಗರೂ ಹೌದು, ಬುದ್ಧಿವಂತರು ಕೂಡಾ ಆಗಿರುವಿರಿ. ಆದ್ದರಿಂದ ಬಾಪ್ ದಾದಾ ಎಲ್ಲರಿಗಿಂತ ಬುದ್ಧಿವಂತ ಮಕ್ಕಳ ಸಂಘಟನೆ ಇಲ್ಲಿದೆ ಎಂದು ಹೇಳುತ್ತಾರೆ. ತಕ್ಷಣದಾನ ಮಹಾಪುಣ್ಯವೆಂಬ ಈ ಸಾಹಸವನ್ನು, ಈಗ ಯಾರೂ ಇಟ್ಟುಕೊಳ್ಳುವುದಿಲ್ಲ. ನದಿಗಳಲ್ಲಿ ಎಲ್ಲರೂ ಸ್ನಾನ ಮಾಡುತ್ತಾರೆ ಆದರೆ ತಾವು ಸಾಗರದಲ್ಲಿ ಸ್ನಾನ ಮಾಡಿದಿರಿ. ನದಿಯಲ್ಲಿ ಸ್ನಾನ ಮಾಡುವುದಕ್ಕೂ ಹಾಗೂ ಸಾಗರದಲ್ಲಿ ಸ್ನಾನ ಮಾಡುವುದಕ್ಕೂ ಅಂತರವಿದೆಯಲ್ಲವೇ? ಇದರಲ್ಲಿ ಎಲ್ಲರೂ ಪಾಸಾಗಿರುವಿರಿ. ಪಾಸಾಗಲು ಇನ್ನೊಂದು ಮಾತು ಉಳಿದಿದೆ. ಆ ಒಂದು ಮಾತಿನಲ್ಲಿ ಹೆಚ್ಚಿನ ಅಂಕಗಳಿವೆ.

ಯಾವುದೇ ಆದೇಶ, ಯಾವಾಗಲಾದರೂ, ಯಾವುದೇ ರೂಪದಲ್ಲಿ, ಎಲ್ಲಿಗಾದರೂ ಹೋಗಲು, ಯಾವುದೇ ಸಮಯದಲ್ಲಾದರೂ ಸಿಕ್ಕರೆ, ಒಂದು ಕ್ಷಣದಲ್ಲಿ ಸಿದ್ಧರಾಗಲು ಆದೇಶ ಬರಬಹುದು ಆಗ ಈ ರೀತಿ ಸದಾಸಿದ್ಧರಾಗಿರುವಿರಾ? ಅಶುದ್ಧ ಪ್ರವೃತ್ತಿಯನ್ನು ಬಿಡಲು ಯಾವುದೇ ಮಾತನ್ನು ಯೋಚಿಸಿದಿರಾ? ವಸ್ತ್ರ- ಒಡವೆ, ಮಕ್ಕಳು ಮುಂತಾದ ಯಾವುದನ್ನೂ ನೋಡಲಿಲ್ಲ. ಇದು ಪವಿತ್ರ ಪ್ರವೃತ್ತಿ. ಇದರಲ್ಲಿ ಬೇರೆ ಯಾವ ಮಾತುಗಳನ್ನು ನೋಡುವ ಆವಶ್ಯಕತೆಯಿದೆ. ಮೊದಲು ಕೇವಲ ಸ್ನೇಹವಿತ್ತು. ಸ್ನೇಹದಿಂದ ಇದೆಲ್ಲವನ್ನೂ ಮಾಡಿದಿರಿ, ಜ್ಞಾನವಿರಲಿಲ್ಲ. ಕೇವಲ ಸ್ನೇಹ ಈ ರೀತಿ ಸದಾ ಸಿದ್ಧರನ್ನಾಗಿ ಮಾಡಿತು. ಈಗ ಸ್ನೇಹದ ಜೊತೆಗೆ ಶಕ್ತಿಯೂ ಇದೆ. ಸ್ನೇಹ ಮತ್ತು ಶಕ್ತಿ ಇದ್ದಾಗಲೂ ಇದರಲ್ಲಿ ಈಗ ಸದಾಸಿದ್ಧರಾಗಲು ತಡವೇಕೆ? ಎಲ್ಲರಿಗೂ ಈ ಸಮಯದಲ್ಲಿ, ಮೈದಾನದಲ್ಲಿ ಇರಬೇಕೆಂದು ಆರಂಭದಲ್ಲಿ ಘೋಷಣೆ ಮಾಡಲಾಗಿತ್ತು. ಈಗ ಅದೇ ರೀತಿ ಬೇರೆಬೇರೆ ರೂಪದಲ್ಲಿ ಪುನರಾವರ್ತಿಸಲಾಗುತ್ತದೆ. ಬಾಪ್ ದಾದಾ ಭವಿಷ್ಯವನ್ನು ತಿಳಿದು ತಮ್ಮೆಲ್ಲರಿಗೂ ಆದೇಶಿಸಿದರೆ ತಾವು ಈ ಸೇವೆಯ ಬಂಧನದಲ್ಲಿ ಬಂಧಿಸಿಕೊಂಡಿರಬಾರದು, ಬಂಧನವಿದ್ದರೂ ಬಂಧನದಲ್ಲಿರಬಾರದು. ಯಾವುದೇ ಆತ್ಮನ ಬಂಧನದಲ್ಲಿರುವುದು ನಿರ್ಬಂಧನದ ಲಕ್ಷಣವಲ್ಲ. ಆದ್ದರಿಂದ ಎಲ್ಲರಿಗೂ ಗೌರವಯುತವಾಗಿ ತೇರ್ಗಡೆ (ಪಾಸ್ ವಿತ್ ಆನರ್) ಹೊಂದಬೇಕಾಗಿದೆ. ತಮ್ಮ ಗಮನದಲ್ಲಿರದ, ಸ್ವಪ್ನದಲ್ಲಿರದ ಮಾತುಗಳ ಘೋಷಣೆಯಾಗುವುದಿದೆ. ಇಂತಹ ಪರೀಕ್ಷೆಗಳಲ್ಲಿ ಪಾಸಾಗುವವರು ಗೌರವಯುತವಾಗಿ ಪಾಸಾಗುವರು (pass with honors). ಆದ್ದರಿಂದ ಮೊದಲೇ ಹೇಳುತ್ತಿದ್ದೇವೆ. ಮೊದಲೇ ಸಂಕೇತ ಸಿಗುತ್ತಿದೆ. ಇದನ್ನೇ ಸೂಕ್ಷ್ಮತೆಯಲ್ಲಿ (ಆಳಕ್ಕೆ) ಹೋಗುವುದು ಎಂದು ಹೇಳಲಾಗುತ್ತದೆ. ಸೂಕ್ಷ್ಮ ಬುದ್ಧಿಯವರ ವಿಶೇಷತೆಗಳೇನು? ಯಾವುದೇ ಪರಿಸ್ಥಿತಿಯಲ್ಲಿಯೂ ತಮ್ಮನ್ನು ತಾವು ಪರಿವರ್ತಿಸಿಕೊಳ್ಳುತ್ತಾರೆ. ಎಂತಹ ಪರಿಸ್ಥಿತಿಯೋ ಅದರಲ್ಲಿ ತಮ್ಮನ್ನು ತಾವು ಪರಿವರ್ತಿಸಿಕೊಳ್ಳುತ್ತಾರೆ (mold). ಅವರಲ್ಲಿ ಎದುರಿಸುವ ಸಾಹಸವಿರುತ್ತದೆ. ಅವರೆಂದೂ ಭಯಪಡುವುದಿಲ್ಲ ಆದರೆ ಅದರ ಆಳಕ್ಕೆ ಹೋಗಿ ತಮ್ಮನ್ನು ತಾವು ಅದರಂತೆಯೇ ನಡೆಸಿಕೊಳ್ಳುವರು. ಯಾವಾಗ ಹಗುರವಾಗಿರುವರೋ ಆಗಲೇ ಪರಿವರ್ತನೆಯಾಗಲು (mold) ಸಾಧ್ಯ. ಯಾವುದೇ ವಸ್ತು ಮೃದುವಾಗಿರಬೇಕು (soft) ಮತ್ತು ಬಿಸಿ (hot)ಯಾಗಿರಬೇಕು ಆಗಲೇ ಅಚ್ಚಿನಂತೆ ತಯಾರಾಗಲು (mold) ಸಾಧ್ಯ. ಯಾವುದೊಂದರ ಕೊರತೆಯಿದ್ದರೆ ಪರಿವರ್ತನೆ (mold) ಆಗಲಾರದು. ಯಾವುದೇ ವಸ್ತುವನ್ನು ಬಿಸಿ ಮಾಡಿ ಮೃದು (soft) ಮಾಡಲಾಗುವುದು, ನಂತರ ಬದಲಾವಣೆ (mold) ಮಾಡಲಾಗುತ್ತದೆ. ಇಲ್ಲಿ ಯಾವ ಮೃದುತ್ವ ಮತ್ತು ಉಷ್ಣತೆ? ಮೃದುತ್ವವಾಗಿದೆ ನಿರ್ಮಾಣತೆ ಮತ್ತು ಉಷ್ಣತೆಯಾಗಿದೆ ಶಕ್ತಿರೂಪ, ನಿರ್ಮಾಣತೆ ಎಂದರೆ ಸ್ನೇಹರೂಪ. ಯಾರಲ್ಲಿ ಪ್ರತಿಯೊಂದು ಆತ್ಮನ ಬಗ್ಗೆ ಸ್ನೇಹವಿರುವುದೋ ಅವರೇ ನಿರ್ಮಾಣರಾಗಿರಲು ಸಾಧ್ಯ. ಸ್ನೇಹವಿಲ್ಲದಿದ್ದರೆ ದಯಾಹೃದಯಿಗಳು, ನಮ್ರಚಿತ್ತರು ಆಗಲು ಸಾಧ್ಯವಿಲ್ಲ. ಆದ್ದರಿಂದ ನಿರ್ಮಾಣತೆ ಮತ್ತು ಶಕ್ತಿರೂಪ ಎಂದರೆ ಎಷ್ಟು ನಿರ್ಮಾಣತೆಯೋ ಅಷ್ಟು ಅಧಿಕಾರಿತನ. ಶಕ್ತಿರೂಪದಲ್ಲಿದೆ ಅಧಿಕಾರಿತನ ಮತ್ತು ನಮ್ರತೆಯಲ್ಲಿ ಸೇವಾಗುಣ, ಸೇವೆ ಮತ್ತು ಅಧಿಕಾರ, ಸೇವಾಧಾರಿಯ ಮತ್ತು ವಿಶ್ವ ಅಧಿಕಾರದ ನಶೆ ಇರಬೇಕು, ಯಾವಾಗ ಈ ಮೃದುತ್ವ ಮತ್ತು

ಉಷ್ಣತೆಯಿರುವುದೋ ಆಗ ಎಲ್ಲಾ ಮಾತುಗಳಲ್ಲಿ ಪರಿವರ್ತನೆ (mold) ಆಗಲು ಸಾಧ್ಯ ನಮ್ಮ ಬುದ್ಧಿಯ ತಕ್ಕಡಿಯಲ್ಲಿ ಉಷ್ಣ ಮತ್ತು ಮೃದುತ್ವ ಸಮಾನವಾಗಿದೆಯೇ ಎಂದು ಎಲ್ಲರೂ ನೋಡಿಕೊಳ್ಳಬೇಕು. ಅತಿಯಾದ ನಿರ್ಮಾಣತೆಯೂ ಕೆಲವು ವೇಳೆ ಹಾನಿಕಾರಕ ಮತ್ತು ಕೆಲವು ವೇಳೆ ಅತಿಯಾದ ಮಾಲಿಕತನ ಹಾನಿ ಮಾಡುತ್ತದೆ ಆದ್ದರಿಂದ ಎರಡರ ಸಮಾನತೆ ಬೇಕು. ಎಷ್ಟು ಸಮಾನತೆಯಿದೆಯೋ ಅಷ್ಟು ಮಹಾನತೆ ಇರುವುದು. ಯಾವ ಮಾತಿನಿಂದ ಗೌರವಯುತವಾಗಿ ತೇರ್ಗಡೆಯಾಗುವಿರೆಂದು ಈಗ ತಿಳಿಯಿತೇ? ಅಂತಿಮ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಮೊದಲೇ ಘೋಷಿಸುತ್ತಿದ್ದೇವೆ. ಎಲ್ಲಾ ಸಮಯದಲ್ಲಿ ನಿರ್ಭಂಧನ, ಸೇವೆಯ ಬಂಧನದಿಂದಲೂ ನಿರ್ಭಂಧನ. ಘೋಷಣೆಯಾಗುತ್ತಲೇ ಸದಾಸಿದ್ಧರಾಗಿ ಮೈದಾನಕ್ಕೆ ಬರುವುದು. ಪ್ರಾಯೋಗಿಕ ಅಂತಿಮ ಪೇಪರ್ ಆ ಸಮಯಕ್ಕೆ ಬರುವುದು. ಈ ಪೇಪರನಲ್ಲಿ ಪಾಸಾದರೆ ಬೇರೆ ಯಾವ ಮಾತು ದೊಡ್ಡದಲ್ಲ. ಈ ಪೇಪರನಲ್ಲಿ ಪಾಸಾಗುವುದು ಎಂದರೆ ಅವ್ಯಕ್ತ ಸ್ಥಿತಿ ತರಯಾಗಿದೆ ಎಂದರ್ಥ. ಶರೀರದ ಭಾವನೆಯಿಂದ ದೂರವಾದ ಮೇಲೆ ಬೇರೆ ಯಾವ ಮಾತು ದೊಡ್ಡದಾಗುವುದಿಲ್ಲ ಇದರಿಂದಲೇ ಆ ಜೀವನರೂಪಿ ದೋಣಿ ಎಷ್ಟರಮಟ್ಟಿಗೆ ಹಗ್ಗಗಳನ್ನು ಬಿಟ್ಟಿದೆ ಎಂಬ ಪರೀಕ್ಷೆಯಾಗುತ್ತದೆ. ಒಂದಾಗಿದೆ ಚಿನ್ನದ ಸಂಕೋಲೆ ಮತ್ತೊಂದು ಕಬ್ಬಿಣದ ಸಂಕೋಲೆ, ಕಬ್ಬಿಣದ ಸಂಕೋಲೆ ಬಿಟ್ಟಿರುವಿರಿ ಈಗ ಬೇರೆಯವರಿಗೆ ಕಾಣದಂತಹ ಚಿನ್ನದ ಸೂಕ್ಷ್ಮ ಸಂಕೋಲೆಗಳಿವೆ.

ಆದ್ದರಿಂದ ಹೇಗೆ ಬೇರೆ ಬಂಧನಗಳಿಂದ ಮುಕ್ತರಾಗುವಿರೋ ಅದೇ ರೀತಿ ಸಹಜ ರೀತಿ ಶರೀರದ ಬಂಧನದಿಂದ ಮುಕ್ತರಾಗಬೇಕು, ಇಲ್ಲವಾದರೆ ಶರೀರದ ಬಂಧನದಿಂದಲೂ ಮುಕ್ತರಾಗುವುದು ಹೆಚ್ಚು ಕಷ್ಟಕರ, ಅಂತಿಮ ಪೇಪರ್ ಆಗಿದೆ ಅಂತ್ಯದ ಮತಿಯಂತೆ ಗತಿ, ಅಂತ್ಯದಲ್ಲಿ ಸಹಜವಾಗಿ ಶರೀರದ ಭಾವನೆಯಿಂದ ಮುಕ್ತರಾಗಬೇಕು. ಇದಾಗಿದೆ ಗೌರವಯುತವಾಗಿ ತೇರ್ಗಡೆಯಾಗುವುದರ ಲಕ್ಷಣ. ಆದರೆ ಯಾವಾಗ ತಮ್ಮ ವಸ್ತ್ರ ಬಿಗಿಯಾಗಿರುವುದಿಲ್ಲವೋ ಆಗ ಸಾಧ್ಯ. ಬಿಗಿತವಿದ್ದರೆ ಸಹಜವಾಗಿ ಮುಕ್ತವಾಗುವುದಿಲ್ಲ. ಬಿಗಿತದ ಅರ್ಥವಾಗಿದೆ ಸೆಳೆತ. ಆದ್ದರಿಂದ ಒಂದು ಕ್ಷಣದಲ್ಲಿ ಬಿಡಲು ವಸ್ತ್ರ ಸಡಿಲವಾಗಿದೆಯೇ ಎಂಬ ಒಂದು ಮಾತನ್ನು ಪರೀಕ್ಷೆ ಮಾಡಿಕೊಳ್ಳಿ. ಎಲ್ಲಿಯಾದರೂ ಅಂಟಿಕೊಂಡಿದ್ದರೆ ಬಿಟ್ಟುಹೋಗಲು ಕಷ್ಟವಾಗುವುದು. ಇದನ್ನೇ ಸದಾಸಿದ್ಧ ಎಂದು ಕರೆಯಲಾಗುತ್ತದೆ. ಯಾರು ಎಲ್ಲಾ ಮಾತುಗಳಲ್ಲಿ ಸದಾಸಿದ್ಧರಾಗಿರುವರೋ ಅವರೇ ಸದಾಸಿದ್ಧರಾಗುವರು (ever ready). ಪ್ರಾಯೋಗಿಕವಾಗಿ ನೋಡಿದಿರಲ್ಲವೇ ಒಂದು ಕ್ಷಣದ ಕರೆಗೆ ಸಿದ್ಧರಾಗಿ ತೋರಿಸಿದರು. ಮಕ್ಕಳು ಏನೆನ್ನುವರು ಎಂದು ಯೋಚಿಸಿದರೆ? ಮಕ್ಕಳ ಮಿಲನ ಮಾಡದೇ ಹೇಗೆ ಹೋಗುವುದು ಎಂದು ಯೋಚಿಸಿದರೆ ? ಆದೇಶ ಬಂದಾಗ ಸದಾಸಿದ್ಧ, ವಸ್ತ್ರ ಸಡಿಲವಾಗಿದ್ದರೆ ತ್ಯಜಿಸುವುದು ಸಹಜವಾಗುವುದು. ಆದ್ದರಿಂದ ಈ ಪ್ರಯತ್ನವನ್ನು ಯಾವಾಗಲೂ ಮಾಡಬೇಕು. ಹೇಗಿದ್ದವರು ಒಂದು ಕ್ಷಣದಲ್ಲಿ ಅತೀತರಾದರು. ಎಂದಾಗ ಇದೇ ಸಂಗಮಯುಗದ ಗಾಯನವಾಗುವುದು. ಬಹಳ ಸಮಯದಿಂದ ಅತೀತರಾಗಿರುವವರು ಒಂದು ಕ್ಷಣದಲ್ಲಿ ಅತೀತರಾಗುವರು. ಬಹಳ ಸಮಯದಿಂದ ಅತೀತವಾಗಿ ಇಲ್ಲದಿದ್ದರೆ ಈ ಶರೀರದ ಪ್ರೀತಿಯೇ ಪಶ್ಚಾತ್ತಾಪದಲ್ಲಿ ತರುವುದು. ಆದ್ದರಿಂದ ಇದಕ್ಕೂ ಪ್ರಿಯರಾಗಬಾರದು, ಇದರಿಂದ ಎಷ್ಟು ನಿರ್ಲಿಪ್ತರಾಗುವಿರೋ ಅಷ್ಟು ವಿಶ್ವಕ್ಕೆ ಪ್ರಿಯರಾಗುವಿರಿ. ಆದ್ದರಿಂದ ಈಗ ಈ ಪುರುಷಾರ್ಥವನ್ನು ಮಾಡಿ, ಯಾವುದೇ ರೋಗದ ರೂಪ ಕಂಡು ಬಂದರೆ ಆಗ ಸರಿಪಡಿಸಿಕೊಳ್ಳುವೆವೆಂದು ತಿಳಿದುಕೊಳ್ಳಬೇಡಿ. ಇನ್ನು ಮುಂದೆ ಅಮೂಲ್ಯ ಮೃತ್ಯುಗಳು ಬರಲಿವೆ ಆ ಮೃತ್ಯುಗಳಿಂದ ತಂದೆಯನ್ನು ಪ್ರತ್ಯಕ್ಷ ಮಾಡುವಿರಿ (ಸನ್ ಶೋಸ್ ಫಾದರ್).ಯಾರಲ್ಲಿ ಒಂದು ವಿಶೇಷ ಗುಣವಿದೆಯೋ ಅವರೇ ಇದನ್ನು ಮಾಡಬಲ್ಲರು. ಈ ಪಾತ್ರವೂ ಬಹಳ ಕಡಿಮೆ ಜನರದಿದೆ. ಅಂತ್ಯದವರೆಗೂ ತಂದೆಯ ಪ್ರತ್ಯಕ್ಷತೆ ಮಾಡುತ್ತಿರುವರು. ಇದೂ ಒಂದು ದೊಡ್ಡ ವಿಷಯವಾಗಿದೆ. ಅಂತಿಮ ಕ್ಷಣದವರೆಗೂ ತಂದೆಯ ಪ್ರತ್ಯಕ್ಷತೆ ಆಗುವುದು. ಬಹಳ ಸಮಯದಿಂದ ಅಶರೀರಿಯಾಗಿರುವ ಅಭ್ಯಾಸವಿರುವಂತಹ ಆತ್ಮರು ಅವಶ್ಯವಾಗಿ ಶಕ್ತಿಶಾಲಿಯಾಗಿರುತ್ತವೆ. ಅವರು ಒಂದು ಕ್ಷಣದಲ್ಲಿ ಅಶರೀರಿ ಆಗುತ್ತಾರೆ. ಎಂತಹದೇ ವಿಘ್ನಗಳ ಸ್ಥಿತಿಯಲ್ಲಿ, ಎಂತಹದೇ ಪರಿಸ್ಥಿತಿಗಳು ಎದುರಿಗೆ ಇದ್ದಾಗಲೂ ತಾವು ನೆನಪಿನಲ್ಲಿದ್ದೀರಿ ಎಂದು ತಿಳಿಯಿರಿ. ಆದರೆ ಒಂದು ಕ್ಷಣ ಯೋಚಿಸಿದಿರಿ ಮತ್ತು ಅಶರೀರಿ ಆಗಬೇಕು. ಹಾಗೆ ನೋಡಿದರೆ ಅಶರೀರಿಯಾಗುವುದು ಬಹಳ ಸಹಜವಾಗಿದೆ. ಆದರೆ ಯಾವ ಮಾತಾದರೂ ಎದುರಿಗಿದ್ದರೆ,

ಯಾವುದಾದರೂ ಸೇವೆಯ ಸಮಸ್ಯೆಯಿದ್ದರೆ ಅಂತಹ ಸಮಯದಲ್ಲಿಯೂ ಒಂದು ಕ್ಷಣದಲ್ಲಿ, ಅದೂ ಸಹ ಹೆಚ್ಚಾಯಿತು. ಯೋಚಿಸುವುದು ಮತ್ತು ಮಾಡುವುದು ಜೊತೆಜೊತೆಗೆ ಇರಬೇಕು. ಯೋಚಿಸಿದ ಮೇಲೆ ಮರುಷಾರ್ಥ ಮಾಡಬಾರದು. ಈಗ ಯೋಚಿಸುತ್ತೀರಿ ನಂತರ ಆ ಸ್ಥಿತಿಯಲ್ಲಿ ಸ್ಥಿತರಾಗುವಿರಿ. ಯೋಚನೆ ಮತ್ತು ಸ್ಥಿತಿಯಲ್ಲಿ ಅಂತರವಿರಬಾರದು. ಯೋಚಿಸಿದಾಕ್ಷಣ ಆಗಬೇಕು. ಯಾರು ಈ ರೀತಿಯ ಅಭ್ಯಾಸಿಯಾಗಿರುವರೋ ಅವರೇ ಸೇವೆ ಮಾಡುವ ಜವಾಬ್ದಾರಿ ತೆಗೆದುಕೊಳ್ಳಬಲ್ಲರು. ಈ ರೀತಿ ಬಹುಸಂಖ್ಯೆಯಲ್ಲಿಲ್ಲ. ಬಹಳ ಕಡಿಮೆ ಸಂಖ್ಯೆಯಲ್ಲಿ ನಿಮಿತ್ತರಾಗಿದ್ದಾರೆ, ಅವರ ಮೇಲೆಯೇ ಇಲ್ಲಿ ಹೂಮಳೆಯಾಗುವುದು. ಹೀಗೆ ಯಾರು ಗೌರವಯುತವಾಗಿ ತೇರ್ಗಡೆಯಾಗುವರೋ ಅವರ ಮೇಲೆಯೇ ದ್ವಾಪರದ ಭಕ್ತರು ಅಂತ್ಯದಲ್ಲಿ ಸಾಕಾರ ರೂಪದಲ್ಲಿ ಹೂವಿನ ಮಳೆಗರೆಯುವರು. ಮಕ್ಕಳು ತಂದೆಯನ್ನು ಪ್ರತ್ಯಕ್ಷ ಮಾಡುವರು ಎಂಬುದನ್ನು ಅವರು ಅಂತ್ಯದವರೆಗೂ ಮಾಡಿಯೇ ಹೋಗುವರು. ಈ ರೀತಿಯ ಸೇವೆಗೆ ಯೋಗ್ಯ ಮೃತ್ಯುವಾಗಿರುತ್ತದೆ. ಇಂತಹ ಸಾವಿನಿಂದಲೂ ಸೇವೆಯಾಗುತ್ತದೆ. ಸೇವೆಯ ಪ್ರತಿ ಮಕ್ಕಳು ನಿಮಿತ್ತರಾಗಿದ್ದಾರೆ, ತಂದೆ-ತಾಯಿಯಲ್ಲ. ಅವರು ಗುಪ್ತರೂಪದಲ್ಲಿ ಇದ್ದಾರೆ. ಸೇವೆಯಲ್ಲಿ ತಾಯಿ-ತಂದೆ ಬೆನ್ನೆಲುಬು ಆಗಿದ್ದಾರೆ ಮತ್ತು ಮಕ್ಕಳು ಮುಂದಿದ್ದಾರೆ. ಈ ಸೇವೆಯ ಪಾತ್ರದಲ್ಲಿ ತಾಯಿ-ತಂದೆಯ ಪಾತ್ರವಿಲ್ಲ. ಇದರಲ್ಲಿ ಮಕ್ಕಳೇ ತಂದೆಯನ್ನು ಪ್ರತ್ಯಕ್ಷ ಮಾಡುವರು. ಇದರಿಂದಲೂ ಸಹ ಸೇವೆಯ ಅಂತ್ಯದಲ್ಲಿ ಪದಕ (ಮೆಡಲ್) ಸಿಗುತ್ತದೆ, ಇಂತಹ ಪದಕ (ಮೆಡಲ್) ನಾಟಕದಲ್ಲಿ ಕೆಲವು ಮಕ್ಕಳಿಗೆ ಸಿಗಲಿದೆ. ನಾವು ಇಂತಹ ಪದಕ (ಮೆಡಲ್) ಪಡೆಯಲು ನಿಮಿತ್ತರಾಗಬಲ್ಲೆವಾ? ಎಂಬುದನ್ನು ಈಗ ಪ್ರತಿಯೊಬ್ಬರೂ ತಮಗೆ ತಾವೇ ನಿರ್ಣಯಿಸಿಕೊಳ್ಳಿ. ಹಳೆಯ ದೂರುಗಳನ್ನು ಕೊಡುವುದರಲ್ಲಿಯೇ ನಿಮಗ್ನವಾಗಬಾರದು. ಯಾರಾದರೂ ತಯಾರಾಗಬಹುದು ಹೊಸ ಹೊಸ ರತ್ನಗಳು ಸಹ ಅದ್ಭುತವನ್ನು ಮಾಡಿ ತೋರಿಸುತ್ತಾರೆ.

ಈಗ ಸೇವೆಯಲ್ಲಿ ನವೀನತೆಯನ್ನು ತರಬೇಕು. ಹೇಗೆ ತಮ್ಮಲ್ಲಿ ನವೀನತೆಯನ್ನು ತರುತ್ತೀರೋ ಅದೇ ರೀತಿ ಸೇವೆಯಲ್ಲಿ ನವೀನತೆಯನ್ನು ತರಬೇಕು. ನವೀನತೆಯನ್ನು ತರುವ 5 ಮಾತುಗಳನ್ನು ನೆನಪಿಟ್ಟುಕೊಳ್ಳಿ, ಇವರು ಎಲ್ಲಿಂದ ಬಂದಿರುವರು ಎಂದು ಎಲ್ಲರ ಮುಖದಿಂದ ಬರಬೇಕು. ಹೇಗೆ ಆರಂಭದಲ್ಲಿ ಬರುತ್ತಿತ್ತು, ಆಗ ವಾಣಿಯ ಬಲವಿರಲಿಲ್ಲ ಈಗ ನಿಮಗೆ ವಾಣಿಯ ಬಲವಿದೆ. ಆದರೆ ಅಲೌಕಿಕ ಸ್ಥಿತಿಯ ಬಲ ಗುಪ್ತವಾಗಿದೆ, ಮುಚ್ಚಿ ಹೋಗಿದೆ. ಹೇಗೆ ಆರಂಭದಲ್ಲಿ ಭಟ್ಟಿಯಿಂದ ಬಂದಂತಹ ಆತ್ಮರು ಸೇವೆಗೆ ಎಷ್ಟು ನಿಮಿತ್ತರಾದರು, ಈಗ ಪುನಃ ಸೃಷ್ಟಿಯ ದೃಶ್ಯವನ್ನು ಬದಲಿಸಲು ನಿಮಿತ್ತರಾಗಿದ್ದಾರೆ ಎಂಬುದು ಎಲ್ಲರಿಗೂ ಅನುಭವಕ್ಕೆ ಬರಬೇಕು. ಆದ್ದರಿಂದ ಈಗ ಪುನಃ ಇಂತಹ ಅಲೌಕಿಕತೆಯನ್ನು ಎಲ್ಲರಿಗೂ ತೋರಿಸಬೇಕು. ಅದಕ್ಕಿಂತ ಈಗಿನ ಸೇವೆ ದೊಡ್ಡದು. ಹೀಗೆ ಶಕ್ತಿರೂಪ ಮತ್ತು ಸ್ನೇಹರೂಪರಾಗಿ ಹೋಗಿ. ಎಷ್ಟೋ ಸಾವಿರ ಜನರ ಮಧ್ಯೆಯಿದ್ದರೂ ದೂರದಿಂದ ಅಲೌಕಿಕ ವ್ಯಕ್ತಿಯಂತೆ ಕಂಡು ಬರಬೇಕು. ಅಪರಿಚಿತನೂ ಸಹ ಇವರು ಅಲೌಕಿಕ ವ್ಯಕ್ತಿಯಾಗಿದ್ದಾರೆ ಎಂದು ಸಾಕಾರ ರೂಪಕ್ಕೆ ಹೇಗೆ ವರ್ಣನೆ ಮಾಡುತ್ತಿದ್ದರೋ ಹಾಗೆ ಸಾವಿರಾರು ಜನರ ಮಧ್ಯದಲ್ಲಿ ಆ ವಜ್ರ ಹೊಳೆಯುತ್ತಿತ್ತು ಅದೇ ರೀತಿ ನೀವೂ ತಂದೆಯನ್ನು ಅನುಸರಿಸಿರಿ. ಜನರ ಪ್ರಕಂಪನಗಳ ಪ್ರಭಾವ ತಮ್ಮಲ್ಲಿ ಆಗಬಾರದು, ಆದರೆ ತಮ್ಮ ಪ್ರಕಂಪನಗಳಿಂದ ಅವರನ್ನು ಅಲೌಕಿಕವಾಗಿ ತಯಾರುಮಾಡಬೇಕು-ಇದೇ ನವೀನತೆಯನ್ನು ತನ್ನಿ. ಈಗ ಸೇವೆಯ ಕಾರಣ ಕೆಲವು ಸಂಸಾರಿ ಜನರಲ್ಲಿ ಕೂಡಿದ್ದೀರಿ ಎಂದು ಅನಿಸುತ್ತದೆ. ಸೇವೆಗಾಗಿ ಸಂಬಂಧದಲ್ಲಿದ್ದು ಅತೀತ(ನಿರ್ಲಿಪ್ತ) ರಾಗುವ ಮಂತ್ರವೇನಿದೆಯೋ ಅದನ್ನು ಮರೆಯಬೇಡಿ. ಆ ಸಂಬಂಧವೇನಿಟ್ಟುಕೊಳ್ಳಬೇಕಿತ್ತು ಇಟ್ಟುಕೊಂಡಿರುವಿರಿ. ಈಗ ಈ ರೀತಿಯ ಸಂಬಂಧವಿಟ್ಟುಕೊಳ್ಳುವ ಆವಶ್ಯಕತೆಯಿಲ್ಲ. ಸೇವೆಯ ಕಾರಣ ತಮ್ಮನ್ನು ಹಗುರವಾಗಿರಿಸಿಕೊಳ್ಳುವ ಅವಶ್ಯಕತೆಯೂ ಇಲ್ಲ. ಆ ಸಮಯ ಕಳೆದುಹೋಯಿತು. ಈಗ ಲೌಕಿಕದ ಮಧ್ಯ ಅಲೌಕಿಕವಾಗಿ ಕಾಣಿಸಿರಿ, ಅನೇಕ ವ್ಯಕ್ತಿಗಳ ಮಧ್ಯ ನೀವು ಅವ್ಯಕ್ತ ಮೂರ್ತಿಯಾಗಿ, ಅವರು ವ್ಯಕ್ತ ಮೂರ್ತಿಯಾಗಿ ಕಂಡುಬರಬೇಕು. ಇದಾಗಿದೆ ಪರಿವರ್ತನೆ. ಆರಂಭದಲ್ಲಿ ಯಾರದಾದರೂ ಪ್ರಕಂಪನಗಳು (vibrations) ಅಥವಾ ಸಂಘದಿಂದ ಪರಿವರ್ತನೆಯಾಗುತ್ತಿದ್ದರೇ? ಆದ್ದರಿಂದ ಬ್ರಹ್ಮಾಕುಮಾರಿಯರಲ್ಲಿ ಹಠ ಜಾಸ್ತಿಯಿದೆ ಎಂದು ಹೇಳುತ್ತಿದ್ದರು. ಆದರೆ ಆ ಹಠ ಒಳ್ಳೆಯದಿತ್ತು. ಇದಾಗಿದೆ ಈಶ್ವರೀಯ ಹಠ, ಆದ್ದರಿಂದ ಈಗ ಪ್ರಕಂಪನಗಳ ಮಧ್ಯ ಇರುತ್ತಿದ್ದರೂ ತಮ್ಮನ್ನು ಅತೀತ(ನಿರ್ಲಿಪ್ತ) ಮತ್ತು ಪ್ರಿಯರನ್ನಾಗಿ ಮಾಡಿಕೊಳ್ಳಿ, ಇಷ್ಟು ಸೇವೆಯನ್ನು ಮಾಡುವುದಿಲ್ಲವೇ? ಕೇವಲ ವಾಣಿಯಿಂದ ಬಲಿಹಾರಿಯಾಗುವುದಿಲ್ಲ. ತಾವು

ಹೇಗೆ ಬಲಿಹಾರಿಗಳಾದಿರಿ? ಆಂತರಿಕ ಆತ್ಮಸ್ನೇಹದಿಂದ, ಬಹಳ ಪ್ರಜೆಗಳನ್ನು ಮಾಡಿರುವಿರಿ ಆದರೆ ಈಗ ಅವರು ಬಲಿಹಾರಿಗಳಾಗಬೇಕು. ಈ ಸೇವೆ ಉಳಿದಿದೆ. ವಾರಸುದಾರರು ಕಡಿಮೆ ಮತ್ತು ಪ್ರಜೆಗಳು ಜಾಸ್ತಿ ಮಾಡಿದ್ದೀರಿ. ಏಕೆಂದರೆ ವಾಣಿಯಿಂದ ಪ್ರಜೆಗಳಾಗುತ್ತಾರೆ ಆದರೆ ಈಶ್ವರೀಯ ಸ್ನೇಹ ಮತ್ತು ಶಕ್ತಿಯಿಂದ ವಾರಸುದಾರರು ಆಗುತ್ತಾರೆ. ಆದ್ದರಿಂದ ವಾರಸುದಾರರನ್ನು ಮಾಡಬೇಕು. ಇದು ಮೊದಲ ಸ್ಟೇಜ್ ನ ಪುರುಷಾರ್ಥವಾಗಿದೆ. ವಾಣಿಯಿಂದ ಯಾರನ್ನಾದರೂ ಕರಗಿಸಲು ಸಾಧ್ಯವಿಲ್ಲ. ಆದರೆ ಸ್ನೇಹ ಮತ್ತು ಶಕ್ತಿಯಿಂದ ಒಂದು ಕ್ಷಣದಲ್ಲಿ ಸ್ವಾಹಾ ಮಾಡಬಹುದು. ಎಷ್ಟು ಜನ ವಾರಸುದಾರರನ್ನು ಮತ್ತು ಎಷ್ಟು ಜನ ಪ್ರಜೆಗಳನ್ನು ತಯಾರು ಮಾಡಿರುವಿರಿ? ವಾರಸುದಾರರು ಯಾವ ಪ್ರಕಾರದವರು ಮತ್ತು ಪ್ರಜೆಗಳು ಯಾವ ಪ್ರಕಾರದವರು ಮತ್ತು ಎಷ್ಟು ಸಮಯದಲ್ಲಿ ಮಾಡಿದಿರಿ? ಇದೂ ಅಂತ್ಯದಲ್ಲಿ ಅಂಕಗಳನ್ನು ಕೊಡುತ್ತದೆ. ಯಾವ ಯಾವ ಪ್ರಶ್ನೆಗಳಲ್ಲಿ ಅಂಕಗಳು ಸಿಗುತ್ತವೆ ಎಂಬ ಅಂತಿಮ ಪೇಪರನ್ನು ಇಂದು ಹೇಳುತ್ತಿದ್ದೇವೆ. ಒಂದಂತೂ ಈ ಮೇಲ್ಕಂಡ ಪ್ರಶ್ನೆ ಇರುವುದು ಎರಡನೆಯದು ಇಡೀ ಜೀವನದ ಅಂತ್ಯದವರೆಗಿನ ಸೇವೆ ಮತ್ತು ಮೂರನೆಯದು ಆದಿಯಿಂದ ಅಂತ್ಯದವರೆಗೆ ಯಾವ ಅವಸ್ಥೆ ಇತ್ತೋ ಅದರಲ್ಲಿ ಎಷ್ಟು ಬಾರಿ ಅನುತ್ತೀರ್ಣರಾಗಿದ್ದೀರಿ. ಎಲ್ಲಾ ಲಿಸ್ಟ್ ಅನೌನ್ಸ್ ಆಗುವುದು. ಎಷ್ಟು ಸಲ ವಿಜಯೀ ಆಗಿರುವಿರಿ, ಎಷ್ಟು ಸಲ ಅನುತ್ತೀರ್ಣರಾಗಿರುವಿರಿ ಮತ್ತು ವಿಜಯೀ ಆಗುವುದಕ್ಕಾಗಿ ಎಷ್ಟು ಸಮಯವನ್ನು ತೆಗೆದುಕೊಂಡಿರುವಿರಿ. ಯಾವುದೇ ಸಮಸ್ಯೆಯನ್ನು ಎದುರಿಸಲು ಎಷ್ಟು ಸಮಯ ಹಿಡಿಯಿತು- ಇದರಲ್ಲಿಯೂ ಅಂಕಗಳು ಸಿಗುತ್ತವೆ. ಎಂದರೆ **ಇಡೀ ಜೀವನದ ಸೇವೆ ಮತ್ತು ಸ್ವಸ್ಥಿತಿ ಮತ್ತು ಅಂತ್ಯದವರೆಗಿನ ಸೇವೆಯ ಪ್ರತ್ಯಕ್ಷತೆ ಈ ಮೂರು ಮಾತುಗಳನ್ನು ನೋಡಲಾಗುವುದು.**

ಈ ಮೂರು ಮಾತುಗಳ ಲೆಕ್ಕ ಏನೇನು ಇದೆಯೆಂದು ಇಲ್ಲಿಯೂ ಪ್ರತಿಯೊಬ್ಬರೂ ಪರಸ್ಪರರ ಮುಂದೆ ಸ್ಪಷ್ಟವಾಗಿ ಕಾಣುವಿರಿ ಮತ್ತು ಅವರನ್ನು ಸಮ್ಮುಖದಲ್ಲಿ ತಂದು ತಮ್ಮ ಫಲಿತಾಂಶವನ್ನು ಸಹ ಮೊದಲೇ ಪರಿಶೀಲನೆ ಮಾಡಬಹುದು. ಮತ್ತು ಪುನರಾವರ್ತಿಸಿ ಕೊರತೆಯನ್ನು ತುಂಬಿಕೊಳ್ಳಬಹುದು. ಇನ್ನೂ ಈ ಮಾತುಗಳಲ್ಲಿ ಕೊರತೆಯಿದ್ದರೆ ತುಂಬಿಕೊಳ್ಳಿ. ದೂರ ಮಾಡಿಕೊಳ್ಳಿ, ಅರ್ಧ ಗಂಟೆಯಲ್ಲಿಯೂ ಮೇಕಪ್ ಮಾಡಿಕೊಳ್ಳ ಬಹುದು. 6 ಗಂಟೆ ತಡವಾದ ರೈಲುಗಾಡಿ ಅದನ್ನು ಅರ್ಧ ಗಂಟೆಯಲ್ಲಿ ಸರಿಹೊಂದಿಸಿಕೊಳ್ಳುತ್ತದೆ. ಆದ್ದರಿಂದ ಮೇಕಪ್ ಮಾಡಿಕೊಳ್ಳುವ ಕೊನೆಯ ಅವಕಾಶವಿದೆ. ಈಗ ಫಲಿತಾಂಶವನ್ನು ನೋಡೋಣ. ಹೇಗೆ ಆರಂಭದಲ್ಲಿ ಎಷ್ಟು ಶ್ರೇಷ್ಠ ಆತ್ಮರು ನಮ್ಮ ಬಳಿ ಬಂದಿದ್ದಾರೆಂಬ ಸಮಾಚಾರ ಬರುತ್ತಿತ್ತೋ ಅದೇ ರೀತಿಯ ಸಮಾಚಾರಗಳು ಮತ್ತೆ ಬರಬೇಕು. ಭಟ್ಟಿಯ ಅರ್ಥವೇ ಆಗಿದೆ ಬದಲಾವಣೆ. ಒಳ್ಳೆಯದು.

**ಅವ್ಯಕ್ತ ಮುರಳಿ 20-12-1969.**

***ಶುದ್ಧ ನೆನಪಿನಿಂದ ಯೋಜನೆಗಳ ಸಫಲತೆ***

**ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.**

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

**ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.**

1. ನಾನು ಸಾಹಸದಿಂದ ತಂದೆಗೆ ಸಮೀಪ ಇದ್ದು ಸ್ನೇಹವನ್ನು ಪಡೆದಿದ್ದೇನೆ.

2. ನಾನು ಸದಾ ಸಿದ್ಧ (ಎವೆರೆಡಿ ಸ್ವರೂಪ).

3. ನಾನು ಏಕತೆ, ಸ್ವಚ್ಛತೆ, ಸೂಕ್ಷ್ಮತೆ, ಮಧುರತೆ ಮತ್ತು ಮನಸಾ, ವಾಚ, ಕರ್ಮಣಾದಲ್ಲಿ ಮಹಾನತೆ - ಈ ಐದು ವಿಷಯಗಳ ಧಾರಣ ಸ್ವರೂಪ.

4. ನಾನು ವಿಶ್ವದಲ್ಲಿರುವ ಆತ್ಮಿಕ ಸಹೋದರರೆಲ್ಲರಿಗೂ ವ್ಯಕ್ತ ದಲ್ಲಿರುವ ಆಕರ್ಷಣಾ ಮೂರ್ತಿಯಾಗಿ ಮತ್ತು ಅಲೌಕಿಕ ವ್ಯಕ್ತಿಯ ಹಾಗೆ ಕಾಣಿಸುತ್ತಿದ್ದೇನೆ.

5. ನಾನು ಸ್ವಚ್ಛವಾದ ಸ್ಮೃತಿ ಮತ್ತು ಒಬ್ಬನೊಂದಿಗೆ ಬುದ್ಧಿಯ ಸಂಲಗ್ನತೆಯನ್ನಿಟ್ಟು ಯೋಜನೆಗಳನ್ನು ಸಫಲ ಮಾಡಿಕೊಂಡಿದ್ದೇನೆ.

6. ನಾನು ತಕ್ಷಣದಾನಿ ಮಹಾ ಪುಣ್ಯಾತ್ಮ.

7. ನಾನು ನಿರ್ಬಂಧನವಾಗಿ ತಯಾರಾಗಿ ಗೌರವಯುತವಾಗಿ ತೇರ್ಗಡೆ(ಪಾಸ್)ಯಾಗಿದ್ದೇನೆ.

8. ನಾನು ಎಂತಹ ಪರಿಸ್ಥಿತಿಯಲ್ಲಾದರೂ ನಿರ್ಮಾಣತೆ (ಮೃದುತ್ವ) ಮತ್ತು ಶಕ್ತಿ ರೂಪ(ಶಾಖ) ವನ್ನು ಸಮಾನವಾಗಿ ಧಾರಣೆ ಮಾಡಿ ನನ್ನನ್ನು ನಾನು ಪರಿವರ್ತಿಸಿಕೊಂಡಿದ್ದೇನೆ (ಮೌಲ್ಡ್).

9. ನನ್ನ ಶಕ್ತಿ ರೂಪದಲ್ಲಿ ಅಧಿಕಾರಿ (ಯಜಮಾನಿ) ಸ್ಥಿತಿ ಮತ್ತು ನಮ್ರತೆಯಲ್ಲಿ ಸೇವಾಗುಣ ಇದೆ.

10. ನಾನು ಸೇವಾ ಬಂಧನದಿಂದಲೂ ನಿರ್ಬಂಧನ ವಾಗಿ ತಯಾರಾಗಿರುವ ಎವರ್ ರೆಡಿ ಸ್ವರೂಪ.

11. ನಾನು ಬಹಳ ಸಮಯದಿಂದ ಅತೀತವಾಗಿದ್ದು (ನಿರ್ಲಿಪ್ತವಾಗಿ) ಒಂದು ಕ್ಷಣದಲ್ಲಿ ಅತೀತವಾಗಿದ್ದೇನೆ.

12. ನಾನು ಪ್ರತಿಕ್ಷಣ ಮತ್ತು ಮೃತ್ಯುವಿನ ಸಮಯದಲ್ಲಿಯೂ ತಂದೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

13. ನಾನು ಒಂದು ಕ್ಷಣದಲ್ಲಿ ಅಶರೀರಿಯಾಗಬಲ್ಲ ಶಕ್ತಿ ಸ್ವರೂಪ.

14. ನನ್ನ ಆಲೋಚನೆ ಮತ್ತು ಕರ್ಮ ಜೊತೆ-ಜೊತೆಗಿವೆ.

15. ನಾನು ಸೃಷ್ಟಿ ಪರಿವರ್ತನೆಗಾಗಿ ನಿಮಿತ್ತವಾಗಿರುವ ಸ್ನೇಹ ಮತ್ತು ಶಕ್ತಿ ಸ್ವರೂಪ.

16. ನಾನು ನನ್ನ ಆಲೋಚನಾ ತರಂಗಗಳಿಂದ ಪ್ರತಿಯೊಬ್ಬರನ್ನು ಲೌಕಿಕವಾಗಿ ತಯಾರು ಮಾಡಿದ್ದೇನೆ.

17. ನಾನು ಸಾವಿರ ಜನರ ಮಧ್ಯ ಇದ್ದರೂ ಆಲೋಚನಾ ತರಂಗಗಳಿಗೆ ಅತೀತವಾಗಿರುವ ವಜ್ರವಾಗಿದ್ದೇನೆ.

18. ನಾನು ಈಶ್ವರೀಯ ಸ್ನೇಹ ಮತ್ತು ಶಕ್ತಿಯಿಂದ ವಾರಸುದಾರರನ್ನು ತಯಾರು ಮಾಡಿದ್ದೇನೆ.

19. ನಾನು ನನ್ನ ಜೀವನ ಕಾಲದ ಸೇವೆ, ಸ್ವಸ್ಥಿತಿ ಮತ್ತು ಅಂತ್ಯದವರೆಗಿನ ಸೇವೆಯ ಪ್ರಮಾಣವನ್ನು ಪ್ರತ್ಯಕ್ಷ ಮಾಡಿರುವ ನಂಬರ್ ಒನ್ ವಿದ್ಯಾರ್ಥಿ.